Regd No BC 155

— ೩೯ —

25—4—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಂಗಳಿಗೆ 6 ಆಣೆ

Protect the cow

ಸ್ವಾಮಿದರು— ಅರಮನೆ ಸಿಂಹಾಸನದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಚೀನಾ ಮತು ಪಾಕಿಸಾನಕೆ ತ ರ ಮೆನನ್‌ರ ಎಚ್ಚರಿಕೆ

ನವ ದೆಹಲಿಯಲ್ಲಿ ನಿನ್ನೆ ಭಾರತದ ವಿದೇಶ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ರವರು ಬಹಿರಂಗ ಸಭೆಯಲ್ಲಿ ಭಾಷಣಮಾಡುತ್ತಾ, ಭಾರತ ಶಾಂತಿಯ ಪ್ರಿಯ ದೇಶವೆಂದು ಚೀನಾ ಹಾಗೂ ಪಾಕಿಸ್ತಾನ ತಿಳಿಯಬಾರದೆಂದು ಎಚ್ಚರಿಸಿದರು. ಪರಿಸ್ಥಿತಿಯೊದಗಿದರೆ ತನ್ನ ದೇಶದ ಸ್ವದೇಶದ ರಕ್ಷಣೆಗಾಗಿ ಯುದ್ಧಮಾಡಲೂ ಭಾರತ ಹಿಂಜರಿಯುವುದಿಲ್ಲ ಎಂದು ಅವರು ನುಡಿದರು

ಒಟ್ಟಿಗೆ ತೆರಿಗೆ

ಇಡೀ 5 ವರ್ಷಗಳಿಗೆ ಒಟ್ಟಿಗೆ ತೆರಿಗೆ ವಿಧಿಸಿ ವರ್ಷ ವರ್ಷ ಅದನ್ನು ವಸೂಲು ಮಾಡುವದಾಗಿ ನಿನ್ನೆ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿ ಶ್ರೀ ಕಂಠಿಯವರು ತಿಳಿಸಿದರು.

ಶೀಘ್ರ ಮುಕ್ತಾಯ

ಜೂನ್ ಅಂತ್ಯದಲ್ಲಿ ಮುಗಿಯಬೇಕಾದ ಲೋಕಸಭೆ ಅಧಿವೇಶನ ಜೂನ್ 10ಕ್ಕೆ ಮುಗಿಯುವ ಸೂಚನೆ ಇದೆ ಪಂಡಿತ ಜವಾಹರಿಗೆ ಹೆಚ್ಚು ಶ್ರಮಕೊಡದಿರುವ ಸಲುವಾಗಿ.

ಅಭಿವೃದ್ಧಿಗೆ ಧಕ್ಕೆ

ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ನಲ್ಲಿ ತೀಜ್ಞಾನ ಪ್ರಕಾಶಗುಪ್ತರವರು ಮಾತನಾಡುತ್ತಾ, ರೈಲ್ವೆ ಪ್ರಾಧಾನ್ಯತೆ ದೂರ ಏರಿಕೆ, ಅಪ್ರತ್ಯಕ್ಷ ತೆರಿಗೆ ಹಾಗೂ ಹಣದುಬ್ಬರ ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆ ಉಂಟುಮಾಡಿದೆ ಎಂದರು.

✕ ಮಾನವ ಸೇವೆಗಾಗಿ ಪ್ರಶಂಸಿಸಿ ಬಳ್ಳಾರಿಯ ಪೌರಸಭೆ ಪದ್ಮಶ್ರೀ ಡಾ|| ಎಂ ಸಿ ಮೋದಿಯವರಿಗೆ ಮೆಚ್ಚುಗೆಯ ವಿಶೇಷ ಪ್ರಮಾಣಪತ್ರ ಅರ್ಪಿಸಿತು.

ಜನಸಾಮಾನ್ಯರಿಗೆ ಹೆಚ್ಚು ಕಷ್ಟ

ಭಾರತ ಸರ್ಕಾರದ ಅಂದಾಜುಪಟ್ಟಿ ಯಲ್ಲಿ ವಿಧಿಸಿರುವ ತೆರಿಗೆಯಿಂದ ಭಾರತದ ಜನಸಾಮಾನ್ಯರ ಜೀವನ ನಡೆಯುವುದು ಇನ್ನೂ ಕಷ್ಟವಾಗುವುದು ಎಂದು ಶ್ರೀ ಸಿ ರಾಜಗೋಪಾಲಾಚಾರಿಯವರು ನಿನ್ನೆ ಮದ್ರಾಸಿನಲ್ಲಿ ತಿಳಿಸಿದರು. ಚೀನಾ ವಶವಾದ ನಂತರ ಭಾರಿ ಅಪ್ರತ್ಯಕ್ಷ ತೆರಿಗೆ ವಿಧಿಸಲಾಗುವದೆಂದು, ಕಾಂಗ್ರೆಸು ಗೆದ್ದ ತಕ್ಷಣ ನಿರ್ದಿಷ್ಟವೆಂದು ನಾನು ಹಿಂದೆಯೇ ತಿಳಿಸಿದ್ದೆ ಎಂದು ಅವರು ನುಡಿದರು. ತೆರಿಗೆಗಳು ಹಾಗೂ ಬೆಲೆಗಳಿಗೆ ಹೆಚ್ಚು ಸೇರಿಸಿದಾಗ್ಯೂ, ಇನ್ನೂ 90 ಕೋಟಿ ರೂಪಾಯಿಗಳಷ್ಟು ಖೋತಾ ಇದೆ, ಅದನ್ನು ಭರ್ತಿಮಾಡಲು ಕೃತಕ ನೋಟುಗಳನ್ನು ಮುದ್ರಿಸಲಾಗುವದು ಎಂದರು. ಆಗ ಬೆಲೆಗಳು ಹೆಚ್ಚಾಗುವವು ಎಂದರು.

ಉಗ್ರ ತೆರಿಗೆಗಳು

ಭಾರತ ಕೈಗಾರಿಕೆ ಹಾಗೂ ವಾಣಿಜ್ಯ ಸಂಘಗಳ ಸಂಘದ ಅಧ್ಯಕ್ಷರಾದ ಶ್ರೀ ಯಾಸ್ಸ ಪ್ರಸಾದ ಜೈನರು ನಿನ್ನೆ ಬೊಂಬಾಯಿನಲ್ಲಿ ಹೇಳಿಕೆಯಿತ್ತು, ಭಾರತದ ಸರ್ಕಾರ ವಿಧಿಸಿರುವ ತೆರಿಗೆಗಳು ಹೆಚ್ಚು ಸಂದರ್ಭಗಳಲ್ಲಿ ಉಗ್ರವಾದುದಾಗಿದೆ ಎಂದರು.

ಸೂರ್ಯ ವಿಗ್ರಹ ಪತ್ತೆ

ಮಧುರಾಂತಕಕ್ಕೆ 10 ಮೈಲಿಗಳ ದೂರದಲ್ಲಿ ಜಯಂತಿಸಲ್ಲಿ ಪ್ರಾಚೀನ ಸೂರ್ಯ ದೇವರ ಏಕಶಿಲಾ ವಿಗ್ರಹ ಪತ್ತೆ ಆಗಿದೆ ಎಂದು ಮಧುರಾ ಮ್ಯೂಸಿಯಂನ ಕ್ಯೂರೇಟರರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ರಾಷ್ಟ್ರೀಯ ಸ್ವಯಂಸೇವಕ ದಳದ ಪದಸ್ಥರೋರ್ವರನ್ನು ಪಾಕಿಸ್ತಾನದವರು ಅಪಹರಿಸಿದ ಸಂದರ್ಭದಲ್ಲಿ ಲೋಕಸಭೆಯಲ್ಲಿ ನಿನ್ನೆ ಪ್ರಶ್ನೆಗಳು ಕೇಳಲ್ಪಟ್ಟವು. ಭಾರತ-ಪಾಕಿಸ್ತಾನ ಗಡಿಯಲ್ಲಿ ರಕ್ಷಣೆಯನ್ನು ಬಲಪಡಿಸಿ, ಅಲ್ಪಸಂಖ್ಯಾತರಿಗೆ ಸ್ವದೇಶಗಳಾರಂಭಿಸಲು ಬಂಧಿಸಬೇಕೆಂದು ತಿಳಿಸಲಾಯಿತು.

ಕಾಶ್ಮೀರ ಚರ್ಚೆ

ವಿಶ್ವಭದ್ರತಾ ಮಂಡಲಿ ನಾಡಿದ್ದು ಕಾಶ್ಮೀರ ಪ್ರಶ್ನೆಯನ್ನು ಪರಿಶೀಲಿಸುವದು ಭಾರತದ ಪರ ಶ್ರೀ ವಿ ಕೆ ಕೃಷ್ಣಮೆನನರು ಪಾಕಿಸ್ತಾನದ ಪರ ಜಫ್ರುಲ್ಲ ಖಾನರು ವಾದಿಸುವರೆಂದು ನ್ಯೂಯಾರ್ಕಿನಿಂದ ವರದಿಯಾಗಿದೆ.

೦೦೦

ರೈಲ್ವೆಗಳ ಕೆಲಸಕಾರ್ಯಗಳ ಪರಿಶೀಲನೆಗೋಸ್ಕರ ವಿಚಾರಣೆ ನಡೆಯಬೇಕೆಂಬ ಬೇಡಿಕೆಯನ್ನು ರೈಲ್ವೆ ಉಪ ಮಂತ್ರಿ ಶ್ರೀ ಎಸ್ ವಿ ರಾಮಮೂರ್ತಿ ನಿನ್ನೆ ದಿನ ಲೋಕಸಭೆಯಲ್ಲಿ ತಿರಸ್ಕರಿಸಿದರು

ಗೋರಖಪುರದಿಂದ ಬಂಕಿರಾಪ ವರದಿ ಕೆಲವು ನಪುಂಸಕರು ಹೆಂಗಸರ ಗಾಡಿಯಲ್ಲಿ ಕಳಿಸಿದಾಗ ಗಾಡಿಯಿಂದ ಇಳಿದು ಹೋಗುವಂತೆ ಹೆಂಗಸರು ಅವರಿಗೆ ತಿಳಿಸಿದರು ನಿಲ್ದಾಣದಲ್ಲಿ ರೈಲು ನಿಲ್ಲಿಸಿದಾಗ ಪೋಲೀಸರಿಗೆ ತಿಳಿಸಲಾಯಿತು. ಗಂಡಸರ ಗಾಡಿಯಲ್ಲಿ ಸ್ಥಳವನ್ನು ಕೊಡುವದಿಲ್ಲವೆಂದು ಗಂಡಸರು ಹೇಳಿದುದಾಗಿ ನಪುಂಸಕರು ತಿಳಿಸಿದರು. ಹೆಂಗಸರ ಗಾಡಿಯಲ್ಲೇ ಸ್ಥಳವನ್ನು ಅವರಿಗೆ ಕೊಡಬೇಕೆಂಬ ತೀರ್ಮಾನವಾಯಿತು.

ಸಾಳೆಯ ಪಂಚಾಂಗ

ಆಸ್ಥಾನ ವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ
26 ಪಸ್ತುತ ಪೂರ್ವಾಷಾಢ

ಕಣ್ಣಿನ ಔಷಧಿ

ಭಾರತದ ಕಣ್ಣಿನ ಔಷಧಿ ಪುನರ್ನವವೆನ್ನು ಮತ್ತು ಅದನ್ನು ತಯಾರಿಸುವ ವಿಧಾನವನ್ನು ಸರಬರಾಜು ಮಾಡುವಂತೆ ರಷ್ಯದ ಆರೋಗ್ಯ ಮಂತ್ರಿಶಾಖೆ ದೆಹಲಿಯ ಆಯುರ್ವೇದ ಸಂಶೋಧನಾ ಸಮಿತಿಗೆ ಬರೆದಿದೆ ಮೂಲಿಕೆಗಳನ್ನು ಈಗಾಗಲೇ 30 ದೇಶಗಳಿಗೆ ಕಳಿಸಿದೆ.

★

ಕರ್ನಾಟಕ ಅಣೆಕಟ್ಟು ಭಾರತದ ಪ್ರದೇಶದ ಮೇಲೆ ಯಾವ ತೊಂದರೆದಾಯಕ ಪರಿಣಾಮವನ್ನು ಮಾಡುವದಿಲ್ಲವೆಂದು ಪಾಕಿಸ್ತಾನದ ವಿದ್ಯುತ್ ಮಂತ್ರಿ ಭುಟ್ಟೋ ರಾವಲ್ಪಿಂಡಿಯಲ್ಲಿ ನಿನ್ನೆ ತಿಳಿಸಿದರು

1962 ರೊಳಗೆ, ಸಿಡಬಿನಿಂದ ರಕ್ಷಿಸುವ ಸಲುವಾಗಿ ಇಡೀ ಭಾರತದಲ್ಲಿ ಸಿಡಬು ಹಾಕಬೇಕೆಂಬ ನಿರ್ಧಾರವನ್ನು ಭಾರತ ಸರ್ಕಾರ ಕೈಗೊಂಡಿದೆ ಎಂದು ದೆಹಲಿ ವಾರ್ತೆ.

ಲಿಯೊನಿಡ್ ಬ್ರೆಜ್ನೆವ್ ಸುಪ್ರೀಂಸೋವಿಯೆಟ್‌ನ ಅಧ್ಯಕ್ಷರಾಗಿ ನಿಕಿಟಾ ಕೃಶ್ಚೇವ್ ರವರು ಪ್ರಧಾನಿಯಾಗಿ ಆಯ್ಕೆಯಾದರೆಂದು ಮಾಸ್ಕೋದಿಂದ ವಾರ್ತೆ ಒಂದಿದೆ.

ಗೌರೀ ಶಂಕರಕ್ಕೆ ಹೋಗುತ್ತಿರುವ ಭಾರತೀಯ ತಂಡ ಕಟ್ಟ ವಾಯುಗುಣವನ್ನು ಇನ್ನೂ ಎದುರಿಸಬೇಕಾಗಿದೆ ಎಂಬುದಾಗಿ ಖಟವಂಡು ವಾರ್ತೆ.

ವೇ ತಿಂಗಳಿನಲ್ಲಿ ಪಂಚಾಯತ್ ರಾಜ್ ಸಮ್ಮೇಳನ ಬೆಂಗಳೂರಿನಲ್ಲಿ ಸೇರುವದು.

ಪೋಲೀಸರಿಗೆ ಗೃಹ ಮಂತ್ರಿಗಳ ಹಿತೋಕ್ತಿ

ಮೈಸೂರು 23— ರಾಜ್ಯದ ಗೃಹಸಚಿವರಾದ ಶ್ರೀ ಆರ್ ಎಂ ಪಾಟೀಲರು ಇಂದು ಸಾಯಂಕಾಲ ಇಲ್ಲಿಯ ಪೋಲೀಸು ಟ್ರೇನಿಂಗು ಸಂಸ್ಥೆಗೆ ಭೇಟಿ ಇತ್ತು ಅಲ್ಲಿ ನಡೆದ ವಿವಿಧ ಚಟುವಟಿಕೆಗಳನ್ನು ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸಿದರು — ಆ ಸಂದರ್ಭದಲ್ಲಿ ನೆರೆದ ಪೋಲೀಸರು ಹಾಗೂ ಪೋಲೀಸು ಅಧಿಕಾರಿಗಳನ್ನು ಕುರಿತು ಮಂತ್ರಿಗಳು ಮಾತನಾಡುತ್ತಾ, ಎಲ್ಲರೂ ಗೌಂವದಿಂದ ಬಾಳಲು ಪ್ರಾಮಾಣಿಕತೆಯಿಂದ ವರ್ತಿಸಲು ಹಾಗೂ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಲು ಪ್ರಯತ್ನಿಸಬೇಕು ಎಂದು ಒತ್ತಿ ಹೇಳಿದರು ; ದೇಶದ ಕಲ್ಯಾಣವೇ ನಿಮ್ಮ ಕಲ್ಯಾಣ, ನಿಮ್ಮ ಕಲ್ಯಾಣವೇ ದೇಶದ ಕಲ್ಯಾಣವೆಂಬ, ಎಂಬುದನ್ನು ಗಮನಿಸಿ ದುಡಿಯಬೇಕೆಂದು ಹೇಳಿ, ಈ ಸಂಸ್ಥೆಯಲ್ಲಿ ಪಡೆಯುವ ಶಿಕ್ಷಣ ನಿಮ್ಮೆಲ್ಲಾ ಕರ್ತವ್ಯಶಾಲನೆಯಲ್ಲಿ ಅತ್ಯಂತ ಉಪಯುಕ್ತವಾಗಲಿ ಎಂದು ಮಂತ್ರಿಗಳು ಹಾರೈಸಿದರು — ಪ್ರಾರಂಭದಲ್ಲಿ ಡಿ ಐ ಜಿ ಖಾದರ್ ಅಲಿಯವರು ಮಂತ್ರಿಯವರಿಗೆ ಸ್ವಾಗತ ಬಯಸಿ ತಾವೆಲ್ಲರೂ ಶಕ್ತ್ಯನುಸಾರ ಸೇವೆಸಲ್ಲಿಸಿ ಖಾತೆಗೆ ಕೀರ್ತಿ ತಂದು ಪ್ರಯತ್ನಿಸುವ ಭರವಸೆ ನೀಡಿದರು

ಗೋವಾದಲ್ಲಿ ಮೈಸೂರು ಪೋಲೀಸರು ಉಪವಾಸದಿಂದ ಬಳಲುತ್ತಿರುವರು

ಗೋವಾದಲ್ಲಿ ಒಳ್ಳೆ ಕೆಲಸವಾಯಿ ಅಲ್ಲಿಯ ಜನರು ಅದಕ್ಕೆ ಪಾತ್ರರಾಗಿದ್ದ ಮೈಸೂರು ಪೋಲೀಸರು ಈಗ ಕುಟುಂಬಕ್ಕೆ ಬರಬೇಕೇ ನಡೆದಿದ್ದು ಅವರಿಗೆ ಊಟ ವಸತಿ ಸಿಗದಾಗಿದೆ ; ಒಬ್ಬಿಬ್ಬರು ಐದೈದು ಎಂಟಂಟು ದಿನ ಉಪವಾಸದಲ್ಲಿಯೇ ಕಳೆಯುತ್ತಿರುವರು : ಅಲ್ಲಿ ಪೋಲೀಸರಿಗೆ ಕೊಡಬೇಕಾಗಿದ್ದ ಸರ್ಕಾರಿ ಊಟವನ್ನು ನಿಲ್ಲಿಸಲಾಗಿದೆಯಲ್ಲದೆ ಪಡಿತ್ವನ್ನು ಕೊಡುವುದನ್ನು ಕೂಡ ನಿಲ್ಲಿಸಲಾಗಿದೆ ; ಪೋಲೀಸರಿಗೆ ಕೊಡಬೇಕಾಗಿದ್ದ ಹಣ್ಣಿನ ಸಂಬಳ, ತುಟ್ಟಿಭತ್ಯ ಇವರಿಗೆ ದೊರೆತಿಲ್ಲ ; ಕೂಡಲೆ ನಾಲ್ಕು ಪೋಲೀಸರು ವರಿಷ್ಠ ಅಧಿಕಾರಿಗಳ ಕಡೆಗೆ ರಾಜೀನಾಮೆ ಸಲ್ಲಿಸಿ ಬಂದಿರುವುದಾಗಿ ತಿಳಿದು ಬಂದಿದೆ ; ಕೆಲವು ಪೋಲೀಸರು ತಮ್ಮನ್ನು ಹಿಂದೆ ಕರೆಸಿಕೊಳ್ಳಬೇಕೆಂದು ಐ ಜಿ ಪಿ ಶ್ರೀ ಹೊಸಕೋಟೆಯವರಿಗೆ ತಂತಿ ಮಾಡಿರುವುದಾಗಿ ತಿಳಿದುಬಂದಿದೆ (ಸಂದೇಶ)

Help The 'Gorakshana'

ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

SHAKTI SUDHA

A Superb Tonic

ವುಡ್‌ಲಾಂಡ್ಸ್ ಪ್ರಶಂಸನೀಯ 11 ನೆ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ್ಯುತ್ತಮ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 20-4-62 ರಿಂದ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



19 ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಬಹು ಪ್ರಖ್ಯಾತ ಪುರುಷರಲ್ಲಿ ಒಬ್ಬರಾದ ಪ್ರಥಮ ರೈಲ್ವೇ ಇಂಜಿನ್ನು ನಿರ್ಮಿಸಿದ, ಮತ್ತಿಕರ ಅನೇಕ ದೇಶೋಪ್ಯೋಗಿ ಕಾರ್ಯಗಳನ್ನು ನೆರವೇರಿಸಿದ ಪೀಟರ್ ಕೂಪರ್ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.